# ಆಹಾ ಸುದ್ದಿ!

★ ಸಸಿತೋಟ

ಇತ್ತೀಚೆಗೆ ಕ್ರಯೋಷಿಯಾದಲ್ಲಿ ಹೀಗೊಂದು ನಾಯಿ– ನಾಯಿಯ ಒಡೆಯರ ಓಟದ ಸ್ಪರ್ಧೆ ನಡೆಯಿತು. ಹೆಸರು 'ಅಂಡರ್‌ಡಾಗ್–17' ಅಂತೆ. ಸೋತರೆ ಇಬ್ಬರಿಗೂ ಅನ್ವಯವಾಗುವಂತಹ ಹೆಸರು.



ಫ್ರಾನ್ಸ್ ಅಧ್ಯಕ್ಷ ಎಮ್ಯಾನ್ಯುಯಲ್ ಮ್ಯಾಕ್ರಾನ್ ತನ್ನ ಮೇಕಪ್‌ಗೆಂದೇ ತಿಂಗಳಿಗೆ 10 ಸಾವಿರ ಡಾಲರ್ (ಸುಮಾರು 6.3 ಲಕ್ಷ ರೂಪಾಯಿ) ಖರ್ಚು ಮಾಡುತ್ತಿದ್ದು, ಅಲ್ಲಿಯ ಜನ ಸಿಟ್ಟಿಗೆದ್ದಿದ್ದಾರಂತೆ. ಮತ್ತೆ ತಮ್ಮ ತೆರಿಗೆ ದುಡ್ಡು ಮೇಕಪ್ ಆಗಿ ಕರಗಿದರೆ ಸುಮ್ಮನಿರುತ್ತಾರೆಯೇ! ಆದರೆ ಮ್ಯಾಕ್ರಾನ್ ರಾಜಕೀಯಕ್ಕೆ ಎಷ್ಟೆಂದರೂ ತಾಜಾ ಮುಖ ಎಂಬುದನ್ನು ಈ ರೀತಿ ಸಾಬೀತು ಮಾಡಲು ಹೋಗಬಾರದಿತ್ತು.



ಪರಾಗ್ವೆಯಲ್ಲಿ ಚಿಂದಿ ವಸ್ತುಗಳನ್ನು ಆರಿಸಿ ಮನೆ ಕಟ್ಟುವುದು ಈಗ ಫ್ಯಾಷನ್ ಅಂತೆ. ಹಳೆ ಪಾತ್ರೆ, ಹಳೆ ಕಬ್ಣ, ಹಳೆ ಬಾಟಲ್ ಎಂದು ಶೇಖರಿಸುವ ಮಂದಿ ಜಾಸ್ತಿಯಾಗಿದ್ದಾರಂತೆ. ಮನೆ ಕುಸಿದರೆ ಸಿಮೆಂಟ್, ಕಬ್ಬಿಣ ಕಳಪೆ ಎಂದು ಗುತ್ತಿಗೆದಾರರನ್ನು ಬಯ್ಯುವ ಹಾಗೂ ಇಲ್ಲ.

ಜಪಾನಿನ ಬಾರ್ ಒಂದರಲ್ಲಿ ಪರಿಚಾರಕನಾಗಿ ಕೆಲಸ ಮಾಡುತ್ತಿರುವ ಈ ಮಂಗನ ಹೆಸರು ಫುಕು ಚಾನ್. ಗ್ರಾಹಕರಿಗೆ ಮದ್ಯ, ಕೈ ಒರೆಸುವ ಕಾಗದ ಪೂರೈಸುವುದಂತೆ. ಜಿಗಿದೋಡುತ್ತ ವೇಗವಾಗಿ ಕೆಲಸ ಮಾಡುತ್ತದಂತೆ ಇದು. ಆಲಸ್ಯದ ಮಾತೇ ಇಲ್ಲ. ಹಾಗಿದ್ದರೆ ಇನ್ನೂ ಬಾಟಲ್, ಲೋಟದ ತಳದಲ್ಲಿರುವ ದ್ರವಕ್ಕೆ ಬಾಯಿ ಹಾಕಿಲ್ಲ ಅಂತಾಯ್ತು.





ಕೆನಡಾದ ಮೇರಿ ಗ್ರಾಮ್ಸ್ ಎಂಬ 84ರ ವಯೋವೃದ್ಧೆ 13 ವರ್ಷಗಳ ಹಿಂದೆ ಹೊಲದಲ್ಲಿ ಕಳೆದುಕೊಂಡಿದ್ದ ವಜ್ರದ ನಿಶ್ಚಿತಾರ್ಥದ ಉಂಗುರ. ಇತ್ತೀಚೆಗೆ ಬೆಳೆದಿದ್ದ ಕ್ಯಾರಟ್ ಕೀಳುವಾಗ ಆಕೆಯ ಸೊಸೆಗೆ ಸಿಕ್ಕಿತಂತೆ ಈ 1 ಕ್ಯಾರಟ್ ವಜ್ರದುಂಗುರ. ಎಷ್ಟೆಂದರೂ 'ಡೈಮೆಂಡ್ಸ್ ಫಾರೆವರ್' ಅಲ್ಲವೇ?

ದೆಹಲಿಯ ಬ್ಯಾಂಕ್ ಒಂದನ್ನು ದರೋಡೆ ಮಾಡಿದ ಇಬ್ಬರು ಕಳ್ಳರು ರೂ 2.3 ಲಕ್ಷ ಮೌಲ್ಯದ ಐದು ಮತ್ತು 10 ರೂಪಾಯಿ ಮುಖಬೆಲೆಯ ನಾಣ್ಯಗಳನ್ನು ಕದ್ದೊಯ್ದಿದ್ದರಂತೆ. 2000 ಮುಖಬೆಲೆಯ ನೋಟುಗಳು ಬೇಕಾದಷ್ಟಿದ್ದರೂ ಅವರು ನಾಣ್ಯಗಳಿಗೆ ಆದ್ಯತೆ ಕೊಟ್ಟಿದ್ದು ನೋಟುಗಳಲ್ಲಿ ಜಿಪಿಎಸ್ ಇರುವ ಚಿಪ್ ಇರಬಹುದು ಎಂಬ ಭಯದಿಂದ. ಸುಳ್ಳು ಸುದ್ದಿಯಿಂದ ಮೋಸ ಹೋದ ಕಳ್ಳರು 'ಚಿಲ್ಲರೆ ಕಳ್ಳ'ರಾಗಿದ್ದಕ್ಕೆ ಜೈಲಿನಲ್ಲಿ ಕೈಕೈ ಹಿಸುಕಿಕೊಳ್ಳುತ್ತಿರಬಹುದು.